ಓ.ಎಸ್.ನಂ.148/2021
ಡಿ.ಡಬ್ಲ್ಯೂ-1

ದಿನಾಂಕಃ 06-08-2024 ರಂದು ಡಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು: ವಾದಿ ಪರ ಶ್ರೀ.ಸಿ.ಆರ್.ಎಸ್ ವಕೀಲರಿಂದ:</u>

1. ಪ್ರಸ್ತುತ ದಾವೆಯ ಬಗ್ಗೆ ನಿಮಗಿಂತಲೂ ನಿಮ್ಮ ತಂದೆ 1 ನೇ ಪ್ರತಿವಾದಿಗೆ ಚೆನ್ನಾಗಿ ಗೊತ್ತಿರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನನಗೂ ಪ್ರಸ್ತುತ ದಾವೆ ಬಗ್ಗೆ ಚೆನ್ನಾಗಿ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. 1976 ರಲ್ಲಿ ನಾನು 1 ವರ್ಷದ ಮಗು ಇದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು 1977 ರಲ್ಲಿ ಜನಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು 1977 ರಲ್ಲಿ ಜನಿಸಿರುವುದರಿಂದ ನನಗೆ ಪ್ರಸ್ತುತ ದಾವೆಯಲ್ಲಿಯ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ದಾಖಲೆಗನಳ್ಳು ನೋಡಿ ಮತ್ತು ನಾನು ನನ್ನ ತಂದೆಯ ಜೊತೆಯಲ್ಲಿಯೇ ಇರುವುದರಿಂದ ನನಗೆ ದಾವೆಯಲ್ಲಿನ ವಿಷಯಗಳ ಬಗ್ಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ.

2. ದಾವಾ ಸ್ವತ್ತಿನಲ್ಲಿ ಮನೆಗಳು ಇರುವುದಿಲ್ಲ. ಈ ಹಂತದಲ್ಲಿ ವಾದಿ ಪರ ವಕೀಲರು ಒಂದು ಫೋಟೊ ತೋರಿಸಿ ಅದು ದಾವಾ ಸ್ವತ್ತಿಗೆ ಸಂಬಂಧಿಸಿದ ಫೋಟೊ ಆಗಿರುತ್ತದೆ ಎಂದು ಸೂಚಿಸಿದಾಗ ಸಾಕ್ಷಿಯು ಅದು ದಾವಾ ಸ್ವತ್ತಿಗೆ ಸಂಬಂಧಿಸಿದ ಫೋಟೊ ಅಲ್ಲ ಎಂದು ಹೇಳುತ್ತಾರೆ. ದಾವಾ ಸ್ವತ್ತು ಇವತ್ತಿಗೂ 8 ಎಕರೆ 18 ಗುಂಟೆ ಜಮೀನು ಅಖಂಡವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ದಾಖಲೆಗಳಲ್ಲಿ ಮಾತ್ರ ಭಾಗ ಮಾಡಿಕೊಳ್ಳಲಾಗಿದೆ ಆದರೆ ಸ್ಥಳದಲ್ಲಿ ಯಾವುದೇ ಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ಪ್ರಸ್ತುತ ದಾವಾ ಸ್ವತ್ತಿನ ಕುರಿತಾಗಿ ಈ ದಾವೆಯನ್ನು ಹೊರತು ಜಪಡಿಸಿ ಬೇರೆ ದಾವೆ ಸಲ್ಲಿಸಿರುವುದಿಲ್ಲ ಎಂದರೆ, ಸಾಕ್ಷಿಯು ಹೌದು ಎಂದು ನುಡಿದು, ಮುಂದುವರೆದು ವಾದಿಯರ ತಂದೆ ನಮ್ಮ ತಂದೆ ವಿರುದ್ಧ ಪ್ರಸ್ತುತ ದಾವಾ ಸ್ವತ್ತಿನ ಕುರಿತಾಗಿ ದಾವೆ ಸಲ್ಲಿಸಿದ್ದರು ಎಂದು ಸಾಕ್ಷಿಯು ನುಡಿಯುುತ್ತಾರೆ. ಪ್ರಸ್ತುತ ದಾವಾ ಸ್ವತ್ತಿನ ಕುರಿತಾಗಿ ನನ್ನ ತಂದೆಯನ್ನು ಮಾಲಿಕರು ಎಂದು ಘೋಷಣೆ ಮಾಡಲಾದ ದಾವೆಯಲ್ಲಿನ

ತೀರ್ಪನ್ನು ಪ್ರಸ್ತುತ ವಾದಿಯರು ಪ್ರಶ್ನೀಸಿರುವುದಿಲ್ಲ ಎಂದರೆ ಸರಿ. ವಾದಿಯರ ತಂದೆ ಕೆಂಚಪ್ಪ ತಮಗೆ ವಯಸ್ಸಾಗಿರುವುದರಿಂದ, ದಾವಾ ಸ್ವತ್ತನ್ನು ನೀವು ಸಾಗುವಳಿ ಮಾಡಿ ಎಂದು ವಾದಿಯರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೆಂಚಪ್ಪ ಮತ್ತು ಸತ್ಯಪ್ಪ ಇವರ ಜೀವಿತಾವಧಿಯಲ್ಲಿ ಯಾವತ್ತಿಗೂ ದಾವಾ ಸ್ವತ್ತಿನ ಕಬ್ಜೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ದಾವಾ ಸ್ವತ್ತನ್ನು ಖರೀದಿಸಿದ ದಿನದಿಂದ ಇಲ್ಲಿಯ ವರೆಗೂ ನಾವು ಕಬ್ಜೆಯಲ್ಲಿ ಇದ್ದೇವೆ ಎಂದು ಸಾಕ್ಷಿಯು ಸ್ವತಃ ನುಡಿಯುತ್ತಾರೆ.

3. ದಿಃ 17-09-2004 ರಿಂದ 18-09-2021 ರ ವರೆಗೆ ವಾದಿಯರು ದಾವಾ ಸ್ವತ್ತಿನ ಕಬ್ಜೆಯನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಇವತ್ತಿನ ವರಗೂ ವಾದಿಯರೇ ದಾವಾ ಸ್ವತ್ತಿನ ಕಬ್ಜೆಯನ್ನು ಹೊಂದಿದ್ದು, ಅದರಲ್ಲಿ ತೊಗರಿ ಬೆಳೆ ಬೆಳೆಯುತ್ತಿದ್ದು ಮತ್ತು ಮನೆಯನ್ನು ಸಹ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ಅವಧಿಯಲ್ಲಿ ವಾದಿಯರು ದಾವಾ ಸ್ವತ್ತಿನ ಕಬ್ಜೆ ಹೊಂದಿರುವ ವಿಷಯದ ಬಗ್ಗೆ ನಿಮಗೆ ಮಾಹಿತಿ ಇರುತ್ತದೆ ಎಂಬ ಸೂಚನೆಗೆ ಸಾಕ್ಷಿಯು ನಾವು ಕಬ್ಜೆಯಲ್ಲಿ ಇರುತ್ತೇವೆ ಎಂದು ನುಡಿಯುತ್ತಾರೆ.

4. ನಿವಾಗಲೀ ನಿಮ್ಮ ತಂದೆಯಾಗಲೀ ದಾವಾ ಸ್ವತ್ತಿನ ಕಬ್ಜೆಯನ್ನು ವಾದಿಯರಿಂದ ಪಡೆಯಲು ದಾವೆ ಸಲ್ಲಿಸಿಲ್ಲ, ಎಂಬ ಸೂಚನೆಗೆ ಸಾಕ್ಷಿಯು ದಾವಾ ಸ್ವತ್ತಿನ ಕಬ್ಜೆಯಲ್ಲಿ್ಕ ನಾವೆ ಇರುವುದರಿಂದ, ದಾವೆ ಮಾಡುವ ಪ್ರಶ್ನೇಯೇ ಉದ್ಭವಿಸಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ದಿಃ 20-09-2021 ರಂದು ವಾದಿಯರು ದಾವಾ ಸ್ವತ್ತನಲ್ಲಿಯ ಬೆಳೆಗಳಿಗೆ ಕ್ರಿಮಿನಾಶಕ ಸಿಂಪಡಿಸುವ ಸಮಯದಲ್ಲಿ,ನೀವುಗಳು ಅವರನ್ನು ಒತ್ತಾಯ ಪೂರ್ವಕವಾಗಿ ದಾವಾ ಸ್ವತ್ತಿನ ಕಬ್ಜೆಯಿಂದ ಹೊರ ಹಾಕಲು ಪ್ರಯತ್ನಿಸಿರುತ್ತೀರಿ ಎಂಬ ಸೂಚನೆಗೆ ಸಾಕ್ಷಿಕಯು ವಾದಿಯರು ಕಬ್ಜೆಯಲ್ಲಿ ಇರುವುದಿಲ್ಲ ಆದ್ದರಿಂದ ಅವರು ನಮ್ಮ ಜಮೀನನಲ್ಲಿಯೇ ಬೆಳೆಗಳಿಗೆ ಔಷಧಿ ಸಿಂಪಡಿಸಲು ಬರುವ ಪ್ರಮೆಯವೇ ಬರುವುದಿಲ್ಲ ಎಂದು ನುಡಿಯುತ್ತಾರೆ. ನಾವು ವಾದಿಯರ ವಿರುದ್ಧ ಸಾವಳಗಿ ಪೋಲಿಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ದೂರಿನ ಅನ್ವಯು ಸಾವಳಗಿ

ಪೋಲಿಸರು ಬಂದು ಸ್ಥಳ ಪರಿಶೀಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಾದಿಯರ ವಿರುದ್ಧ ದೂರು ನೀಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ದಾವಾ ಸ್ವತ್ತಿನಲ್ಲಿ ವಾದಿಯರು 1996 ರಲ್ಲಿ ಮನೆ ಕಟ್ಟಿಸಿದ್ದು, ಅದಕ್ಕೆ ನೀವು ಯಾವುದೇ ತಕರಾರು ಮಾಡಿಲ್ಲ ಎಂಬ ಸೂಚನೆಗೆ ಸಾಕ್ಷಿಯು ದಾವಾ ಸ್ವತ್ತಿನಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದು ನುಡಿಯುತ್ತಾರೆ. 2021 ರಲ್ಲಿ ವಾದಿಯರು ಇನ್ನೊಂದು ಮನೆ ಕಟ್ಟಿಸುವ ಸಮಯದಲ್ಲಿ ನೀವು ತಕರಾರು ಮಾಡಿರುತ್ತೀರಿ ಎಂಬ ಸೂಚನೆಗೆ ಸಾಕ್ಷಿಯು ವಾದಿಯರು ಯಾವತ್ತಿಗೂ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಲು ಪ್ರಯತ್ನಿಸಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಪ್ರತ್ಯಕ್ಷ ಕಬ್ಜಾ ವಹಿವಾಟ ನಾವೆ ಹೊಂದಿರುತ್ತೇವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾವು ಸಾಗುವಳಿ ಮಾಡುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರು ಮೊದಲು ಎತ್ತುಗಳ ಮೂಲಕ ಈಗ ಟ್ರಾಕ್ಟರ ಮೂಲಕ ಬಿತ್ತನೆ  ಕಾರ್ಯ ಮಾಡುತ್ತಾರೆ ಎಂದರೆ ಸರಿಯಲ್ಲ.

6. ನಾನು ಹೇಳುವಂತೆ ದಾವಾ ಸ್ವತ್ತಿನಲ್ಲಿ ಹಿಸ್ಸೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ.  ಸರ್ಕಾರದ ಸೌಲಭ್ಯ ಮತ್ತು ಸೊಸೈಟಿಯಿಂದ ಸಾಲ ಜಪಡೆಯಲು ವಾದಿಯರಿಗೆ ಗೊತ್ತಾಗದ ಹಾಗೆ ಪಹಣಿ ಪತ್ರಿಕೆಗಳಲ್ಲಿ ನಮ್ಮ ಹೆಸರುಗಳನ್ನು ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತಿನಲ್ಲಿ ಕಬ್ಜೆಯಲ್ಲಿ ಇರುವ ವಿಷಯ ನಮಗೆ, ಅಕ್ಕ-ಪಕ್ಕದ ಊರಿನ ಜನರಿಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ಸಲ್ಲಿಸುವ ಪೂರ್ವದಲ್ಲಿ ನನ್ನ ಮತ್ತು ವಾದಿಯರ ಮಧ್ಯೆ ದಾವಾ ಸ್ವತ್ತಿನ ಕಬ್ಜೆಯ ಕುರಿತಾಗಿ ಯಾವುದೇ ತಂಟೆ ತಕರಾರು ಆಗಿರುವುದಿಲ್ಲ ಎಂದರೆ ಸರಿ. ವಾದಿಯರು ದಾವಾ ಸ್ವತ್ತಿನ ನಿರಂತರ ಕಬ್ಜೆಯನ್ನು ಹೊಂದಿರುವುದರಿಂದ ಅವರು ಮಾಲಿಕರಾಗುತ್ತಾರೆ ಎಂದು ತಿಳಿದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲವಕಾಶ ಕೋರುತ್ತಾರೆ, ಕಾಲವಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ